ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಸದಸ್ಯರು ಜೆಡ್.ಪಿ ಸಣ್ಣ ಕೆರೆಗಳ ಸಂಖ್ಯೆ ಮತ್ತು ಅಣೆಕಟ್ಟುಗಳ ಸಂಖ್ಯೆ ಮುಂತಾಗಿ ಬಹಳ ವಿವರಗಳನ್ನು ಕೇಳಿರುತ್ತಾರೆ. ವಿವರವಾದ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಉತ್ತರವನ್ನು ಕಡಿಮೆ ಅವಧಿಯಲ್ಲಿ ಹೇಳಲು ಆಗಲಿಲ್ಲ. ಮುಂದೆ ಅದನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಜಿಲ್ಲಾ ಸಣ್ಣ ನೀರಾವರಿ ಉಪವಿಭಾಗವು ಇತ್ತು. ಅದನ್ನು ಅಲ್ಲಿಂದ ಏತಕ್ಕಾಗಿ ತೆಗಿದಿದ್ದಾರೆ ಎಂಬುದು ನನ್ನ ಪ್ರಶ್ನೆಯಾಗಿದೆ. ಹಾಗೆಯೇ ನಮ್ಮ ಸೇಡಂ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಇವೆ ಮತ್ತು ಅವುಗಳ ಕುರಿತು ವ್ಯವಸ್ಥಿತವಾದ ಕಾರ್ಯಕ್ರಮಗಳೇನು ಎಂಬುದು ನನ್ನ ಪ್ರಶ್ನೆ ..

ಅಧ್ಯಕ್ಷರು : ನಮ್ಮ ಕಾರ್ಯಕಲಾಪಗಳು ಮುಗಿಯುವುದರೊಳಗಾಗಿ ಮಾನ್ಯ ಸದಸ್ಯರಿಗೆ ವಿವರಗಳನ್ನು ತರಿಸಿಕೊಡಿ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನನ್ನ ಐದು ಪ್ರಶ್ನೆಗಳೂ ಇದೇ ರೀತಿ ಆಗಿವೆ. ನನಗೆ ಉತ್ತರವೇ ಬಂದಿಲ್ಲ. ಅದೇ ರೀತಿಯಲ್ಲಿ ಚುಕ್ಕೆ ರಹಿತ ಪ್ರಶ್ನೆಗಳಿಗೂ ನನಗೆ ಉತ್ತರ ಸಿಗಲಿಲ್ಲ.

ಅಧ್ಯಕ್ಷರು : ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲು ಮಾನ್ಯ ಮಂತ್ರಿಯವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ,ಮಾನ್ಯ ಸದಸ್ಯರು ಕೇಳಿದ ವಿವರಗಳನ್ನು ನಾನು ಸಕಾಲದಲ್ಲಿ ಅವರಿಗೆ ಒದಗಿಸಿ ಕೊಡುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭ

355 (3426) ಶ್ರೀ ಎಂ.ಎಸ್. ಅತ್ಮಾನಂದ (ಮಂಡ್ಯ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಮಂಡ್ಯ ಜಿಲ್ಲೆಯಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭಿಸಲು ಅವಕಾಶವಿರುವುದನ್ನು ಸರ್ಕಾರವು ಗಮನಿಸಿದೆಯೇ?

ಆ)ಹಾಗಿದ್ದಲ್ಲಿ ಕಿರು ಜಲ ವಿದ್ಯುತ್ ಯೋಜನೆ ಪ್ರಾರಂಭಿಸಲು ಸರ್ಕಾರವು ಏನಾದರೂಕ್ರಮ ಕೈಗೊಂಡಿದೆಯೇ?

ಇ)ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ವೀರಕುಮಾರ್ ಆಪ್ಪಾಸೋ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ)ಹೌದು.

ಆ)ಈಗಾಗಲೇ ಮಂಡ್ಯ ಜಿಲ್ಲೆಯಾದ್ಯಂತ ಈವರೆಗೆ 33.05 ಮೆ. ವ್ಯಾ. ಸಾಮರ್ಥ್ಯದ 14ಕಿರುಜಲ ವಿದ್ಯುತ್ ಯೋಜನೆಗಳನ್ನು ಗುರುತಿಸಿ ಖಾಸಗಿ ಬಂಡವಾಳದಾರರಿಗೆ ಹಂಚಿಕೆ ಮಾಡಲಾಗಿದೆ.

ಇ)ಈ ಯೋಜನೆಗಳ ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ANNEXURE

DETAILS OF SMALL HYDRO PROJECTS IN MANDYA DIST.

Sl. No.	Namce & Address of the Developer	Location	Capacity in MW	Progress
1	2	3	4	5
1.	Cauvery Hydro Energy Ltd., No.168, 8the Main, RMV Extn, Bangalore-89	Shiva	3.00	Project commissioned in Sept. '98'
2.	Yuken India Ltd., White Field Road, White Field, Bangalore -6.	Attihalla	0.35	Project Commissioned in July 1998.
3.	Kilara Power Pvt. Ltd., 204/c, 6th Main, 27th Cross, 3rd Block, Jayanagar, Bangalore -11.	Kilara	2.00	Project commissioned in December 1999.
4.	Vijayalakshmi Hydro Power Pvt. Ltd., 209, Swiss Complex, R.C. Road, B'lore.	Hebbakavaid	3.00	Obtained all statutory clear ances. Tenders for the Work Received & are being evaluated.
5.	V. Pram Power Co., No.8, Kukkarhaalli , 2nd Main, MYSORE-9.	Devaryaanicut	0.50	DPR has been cleared by KREDL Clearence From Irri gation Dept. accorded. Land acquisition under progress.

1	2	3	4	5
6.	Graphite India Ltd., Visveswara Industrial Area, White Field Road, Bangalore.	Link Canal	1.50	Obtained all clearances & tendors for the work received& the same is being evaluate Irrigation Dept. is yet to hend over land.
7.	Aparana Power Ltd., B-2, Industrial Holalu Estate, Sagar Road, Shimoga .		050	The DPR has been prepared. In the proess or obtaining clear ances.
8.	L.K. Power Corporation Ltd., Bewary House, 7th Main, Kanakapura Road, Bangalore - 62	Maddur	2.00	Civil work of site has been stated. IREDA has sanctioned Loan for the project.
9.	L.K Power Corporation Ltd., Bewary House, 7th Main, Kanakapura Road, Bangalore - 62	Devarajurs	6.00	Survey & Investitation comple ted. DPR under preparation.
10.	Matha Hydro Power Tech Ltd., Sourabha, V Cross ANR Road, Shimoga.	Lokasara	0.25	Investigation and Surveny be ing conducted.
11.	Kilara Power Pvt. Ltd., 204/c, 6th Main, 27th Cross, 3rd Block, Jayanagar, Bangalore -11.	45the KMof Maddur Branch Canal.	0.45	Investitation and Survey being conducted.

1	2	3	4	5
12.	Atria Hydel Power Ltd., Bangalore.	Brindavan (KRS)	12.00	The Developer has entered into agrement wih the Govt.
13.	Trishul Power Pvt, Ltd., No.4269, Railway Rarallel Road, 2nd Stage, Rajajinagar, Subramnayanagar, Bangalore-21.	Hemagiri 1.00 Aicut.		Investigation and Survey being being conducted.
14.	Kilara Power Porject Ltd., 204/c, 6th Main, 27th Cross, 3rd Block, Jayanagar, Bangalore -11.	26the Km of Maddur Branch Canal	0.50	-do-

ಶ್ರೀ ಎಂ.ಎಸ್.ಆತ್ಮಾನಂದ : ಸನ್ಮಾನ್ಯ ಅಧ್ಯಕ್ಷರೇ, ಅವರು ಉತ್ತರದಲ್ಲಿ ಸುಮಾರು 33.05 ಮೊಗಾವ್ಯಾಟ್ ಸಾಮರ್ಥ್ಯದ 14 ಕಿರು ಜಲವಿದ್ಯುತ್ ಯೋಜನೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ಗುರುತಿಸಿ ಅವುಗಳನ್ನು ಖಾಸಗಿ ಬಂಡವಾಳದಾರರಿಗೆ ಹಂಚಿಕೆ ಮಾಡಲಾಗಿದೆ ಎಂಬುದನ್ನು ತಿಳಿಸಿದ್ದಾರೆ. ಈವರೆಗೆ ಈ ಜಲವಿದ್ಯುತ್ ಯೋಜನೆಗಳಿಗೆ ಎಷ್ಟು ಬಂಡವಾಳ ಹೂಡಲಾಗಿದೆ ಮತ್ತು 14 ಕಿರು ಜಲವಿದ್ಯುತ್ ಯೋಜನೆಗಳಲ್ಲಿ ಯಾವುವು ಯಾವ ಹಂತದಲ್ಲಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೋರುತ್ತೇನೆ.

ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಕಿರು ಯೋಜನೆಗಳಿಗೆ ಎಷ್ಟು ಬಂಡವಾಳವನ್ನು ನಾವು ಹೂಡಿದ್ದೇವೆ ಎಂಬ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿಡುತ್ತೇವೆ. ಈ 14 ಕಿರು ಜಲವಿದ್ಯುತ್ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಯಾವ ದಿನಾಂಕದಿಂದ ನಾವು ಅವರಿಗೆ ಪ್ರಾರಂಭ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ, ಯಾರು ವಿಳಂಬ ಮಾಡಿದ್ದಾರೆ ಅಂತಹ ಕಂಪನಿಗಳಿಗೆ ನೋಟೀಸ್ ಕೊಟ್ಟು ಅವಕಾಶವನ್ನು ಹಿಂತೆಗೆದುಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತೇವೆ ಎಂದು ನಾನು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸುಮಾರು ಮೂರು ಕಿರು ಜಲವಿದ್ಯುತ್ ಯೋಜನೆಗಳು ಸಂಪೂರ್ಣಗೊಂಡಿದೆ. ಇನ್ನುಳಿದ 11 ಕಿರು ಜಲವಿದ್ಯುತ್ ಯೋಜನೆಗಳನ್ನು ಈಗ ಖಾಸಗಿ ಬಂಡವಾಳದಾರರು ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯವು ವಿದ್ಯುತ್ ಕ್ಷಮೆವನ್ನು ಎದುರಿಸುತ್ತಿರತಕ್ಕಂಥ ರಾಜ್ಯವಾಗಿದೆ. ಆದ್ದರಿಂದ ಇದನ್ನು ಆದಷ್ಟು ಶೀಘ್ರಗತಿಯಲ್ಲಿ ಅನುಷ್ಠಾನಗೊಳಿಸಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಾ ಮಂಡ್ಯ ಜಿಲ್ಲೆಯಲ್ಲಿಇನ್ವೆಸ್ಟಿಗೇಶನ್ ಸಬ್ ಡಿವಿಜನ್ ಇದ್ದು, ಅದರ ಕಾರ್ಯ ವ್ಯಾಪ್ತಿ ನಾಲ್ಕು ಜಿಲ್ಲೆಗಳಿಗೆ ಇತ್ತು. ಆ ಉಪ- ವಿಭಾಗದವರು 14 ಕಿರು ಜಲವಿದ್ಯುತ್ ಯೋಜನೆಗಳನ್ನು ಮಂಡ್ಯ ಜಿಲ್ಲೆಯಲ್ಲಿ ಹಾಗೂ ಉಳಿದ ನಾಲ್ಕು ಜಿಲ್ಲೆಗಳಲ್ಲಿ ಇನ್ನೂ ನಾಲ್ಕು ಕಿರುಜಲ ವಿದ್ಯುತ್ ಯೋಜನೆಗಳನ್ನು ಗುರುತಿಸಿದ್ದಾರೆ. ಆದರೆ ಆ ಕಚೇರಿಯನ್ನು ಮೈಸೂರಿಗೆ ಸ್ಥಳಾಂತರ ಮಾಡಿದ್ದಾರೆ. ಈಗ ಮೈಸೂರಿನಿಂದ ಪುನಃ ಬೇರೆ ಕಡೆಗೆ ಸ್ಥಳಾಂತರ ಮಾಡುವ ಸಿದ್ಧತೆಯಲ್ಲಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ಅದನ್ನು ಮೈಸೂರಿನಲ್ಲಿಯೇ ಉಳಿಸಿಕೊಂಡು ಈ ಜಲವಿದ್ಯುತ್ ಯೋಜನೆಗಳ ಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೋರುತ್ತೇನೆ.

ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಅಪರ್ಣ ಪವರ್ (ಲಿ) ಮತ್ತು ಎಲ್.ಕೆ.ಪವರ್ (ಲಿ) ಹಾಗೂ ಏಟ್ರಿಯಾ ಪವರ್ (ಲಿ) ಈ ಮೂರು ಕಂಪನಿಗಳು ತಡವಾಗಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಈಗಾಗಲೇ ನಾವು ಅವರಿಗೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಹಾಗೆಯೇ ಕಚೇರಿಯನ್ನು ಮೈಸೂರಿನಿಂದ ಸ್ಥಳಾಂತರಿಸುವ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.